ಉ) ಮೂಲಭೂತ ಸೌಕರ್ಯಗಳಾದ ರಸ್ತೆ ಅಭಿವೃದ್ಧಿ, ಸಮರ್ಪಕ ನೀರು ಪೂರೈಕೆ, ಕೈಗಾರಿಕಾ ಪ್ರದೇಶದಲ್ಲಿ ದಾರಿದೀಪ ಅಳವಡಿಸುವುದು. ಈ ಬಗ್ಗೆ ಸರ್ಕಾರ ಈಗಾಗಲೇ ರೂ. 9.86 ಕೋಟಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿದೆ ಹಾಗೂ ಕೈಗಾರಿಕೆಗಳ ಬೆಳವಣಿಗೆ ಹಾಗೂ ಹೆಚ್ಚಿನ ಬಂಡವಾಳ ಆಕರ್ಷಿಸಲು, ಹೊಸ ಕೈಗಾರಿಕಾ ನೀತಿಯಡಿಯಲ್ಲಿ ಹಲವಾರು ರಿಯಾಯತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗಿದೆ.

796 (389) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಹಸಿರೀಕರಣಗೊಳಿಸಲು ಅರಣ್ಯ ಇಲಾಖೆ ಕೈಗೊಂಡ ಯೋಜನೆಗಳಾವುವು ;

ಆ) ಮೈಸೂರು ನಗರದಲ್ಲಿ ಹಸಿರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ವೆಚ್ಚ ಮಾಡಿರುವ ಹಣವೆಷ್ಟು ; (ವರ್ಷವಾರು ವಿವರ ನೀಡುವುದು) ;

ಇ) ಮೈಸೂರು ನಗರದಲ್ಲಿರುವ ಶಾಲಾ, ಕಾಲೇಜುಗಳು ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರಿ ಕಛೇರಿ ಇತ್ಯಾದಿ ಸ್ಥಳಗಳಲ್ಲಿ ಹಸಿರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಾವುವು ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸಧ್ಯದಲ್ಲಿ ನಗರ ಪ್ರದೇಶಗಳಲ್ಲಿ ಹಸಿರೀಕರಣಗೊಳಿಸಲು ಅರಣ್ಯ ಇಲಾಖೆಯಲ್ಲಿ ಪ್ರದೇಶ ಹಸಿರೀಕರಣ (ರಾಜ್ಯ ವಲಯ) ಯೋಜನೆ ಇರುತ್ತದೆ. ಈ ಯೋಜನೆಯಲ್ಲಿ ನಗರಗಳ, ದಾರಿಗಳ ಬದಿಯಲ್ಲಿ, ಹೊಸ ಬಡಾವಣೆಗಳಲ್ಲಿ, ಶಾಲೆ–ಕಾಲೇಜು ಆವರಣಗಳಲ್ಲಿ ಮತ್ತು ಇತರ ಸಾರ್ವಜನಿಕ / ಸರ್ಕಾರಿ ಸ್ಥಳಗಳಲ್ಲಿ ಸಸಿಗಳನ್ನು ಬೆಳಸಲಾಗುತ್ತಿದೆ.

ಆ) ಮೈಸೂರು ನಗರದಲ್ಲಿ ಹಸಿರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ವಚ್ಚ ಮಾಡಿರುವ ಹಣದ ವರ್ಷವಾರು ವಿವರ ಈ ಕೆಳಕಂಡಂತೆ ಇರುತ್ತದೆ:–

ಅರಣ್ಯ ಇಲಾಖೆ

ವರ್ಷ	ಜೆಬಿಐಸಿ 1ನೇ ಹಂತ	ನಗರ ಹಸಿರೀಕರಣ	ಮೂಡಾ	ಎಂಸಿಸಿ	ಒಟ್ಟು
2003–04	48.805	5.180	––	––	53.985
2004–05	––	3.158	6.000	3.650	12.808
2005–06	––	3.740	18.500	1.440	23.680

ಇ) ಮೈಸೂರು ನಗರದ ಶಾಲಾ, ಕಾಲೇಜು ವಿಶ್ವ ವಿದ್ಯಾನಿಲಯಗಳ ಆವರಣದಲ್ಲಿ ಮತ್ತು ಇನ್ನಿತರೆ ಕಡೆಗಳಲ್ಲಿ ಈ ಕೆಳಕಂಡಂತೆ ಕಳೆದ 3 ವರ್ಷಗಳಲ್ಲಿ ಒಟ್ಟು 230 ಹೆ. ಪ್ರದೇಶದಲ್ಲಿ ಗಿಡಗಳನ್ನು ನೆಡಲಾಗಿದೆ.

ವರ್ಷ	ಶಾಲಾ ಕಾಲೇಜ್, ವಿಶ್ವವಿದ್ಯಾನಿಲಯ ಹಾಗೂ ಸಂಸ್ಥೆಗಳ ಸ್ಥಳಗಳಲ್ಲಿ	ರಸ್ತೆಬದಿ, ರಿಂಗ್ ರಸ್ತೆ ಹಾಗೂ ಇತ್ಯಾದಿ ಸರ್ಕಾರಿ ಸ್ಥಳಗಳಲ್ಲಿ	ಒಟ್ಟು
2003–04	24.00 ಹೆ.	141.00 ಹೆ.	165.00 ಹೆ
2004–05	2.50 ಹೆ.	37.50 ಹೆ	40.00 ಹೆ
2005–06	3.00 ಹೆ.	22.00 ಹೆ.	25.00 ಹೆ.
ಒಟ್ಟು	**29.50 ಹೆ**	**200.50 ಹೆ.**	**230.00 ಹೆ.**

797 (1192) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು ;

ಆ) ಈ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು ; (ವಿವರವನ್ನು ನೀಡುವುದು) ;

ಇ) ಈ ಕಛೇರಿಗಳಲ್ಲಿ ಕೆಲಸದ ಒತ್ತಡ ಜಾಸ್ತಿಯಿದ್ದು ಸಾರ್ವಜನಿಕರಿಗೆ ಶೀಘ್ರ ಸೇವೆ ಮಾಡಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಮೈಸೂರು ನಗರ ಹಾಗೂ ತಾಲ್ಲೂಕಿಗೆ ಹೊಸ ಉಪ ನೋಂದಣಾಧಿಕಾರಿಗಳ ಕಛೇರಿಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಮೈಸೂರು ನಗರದಲ್ಲಿ ಒಟ್ಟು ಮೂರು ಉಪ ನೋಂದಣಿ ಕಛೇರಿಗಳು ಇರುತ್ತವೆ. ಅವುಗಳೆಂದರೆ

1) ಉಪ ನೋಂದಣಿ ಕಛೇರಿ, ಮೈಸೂರು (ಉತ್ತರ)

2) ಉಪ ನೋಂದಣಿ ಕಛೇರಿ, ಮೈಸೂರು (ದಕ್ಷಿಣ)

3) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆವರಣದಲ್ಲಿರುವ ಉಪ ನೋಂದಣಿ ಕಛೇರಿ.

ಆ) ಉಪ ನೋಂದಣಿ ಕಛೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ವಿವರ:

ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ
1. ಕೇಂದ್ರ ಸ್ಥಾನ ಉಪ ನೋಂದಣಾಧಿಕಾರಿಗಳು	1	1